1992-93ನೇ ಸಾಲಿಗೆ

ದಿನಾಂಕ : 29.3.93ರಲ್ಲಿ ರೂ. 1.50 ಲಕ್ಷ

ಬಿಡುಗಡೆ ಮಾಡಿ ಆದೇಶ ಹೊರಡಿಸಲಾಗಿದ್ದು ಕ್ರಮವಾಗಿ ದಿನಾಂಕ :15.5.92 ಹಾಗೂ 23.6.93 ರಂದು ಡಿ.ಡಿ. ಕೊಡಲಾಗಿದೆ.

ವಿಷಯ:- ಚನ್ನಪಟ್ಟಣ ನಗರದ ಕುಡಿಯುವ ನೀರು ಸರಬರಾಜು ಯೋಜನೆ ಕುರಿತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 165(423)

ಶ್ರೀ ಸಾದತ್ ಅಲಿಖಾನ್(ಚನ್ನಪಟ್ಟಣ)

ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಚನ್ನಪಟ್ಟಣ ನಗರದ ಕುಡಿಯುವ ನೀರು ಸರಬರಾಜು ಯೋಜನೆಗೆ ಶಾಶ್ವತ ಜಲ ಮೂಲವಿಲ್ಲದ ವಿಷಯವು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಚನ್ನಪಟ್ಟಣ ನಗರದ ನೀರು ಸರಬರಾಜು ಯೋಜನೆಗೆ ಕಾವೇರಿ ನದಿ ನೀರನ್ನು ಶಾಶ್ವತ ಜಲಮೂಲವಾಗಿ ಪರಿಗಣಿಸಿ 1993-94ರ ಆಯವ್ಯಯದಲ್ಲಿ ಸೇರಿಸುವ ವಿಷಯವು ನಿಜವೇ?

ಇ) ಹಾಗಿದ್ದಲ್ಲಿ ಇದನ್ನು ಯಾವಾಗ ಸೇರಿಸಲಾಗುವುದು? (ಸೇರಿಸಲು ನಿಗಧಿತ ದಿನಾಂಕವನ್ನು ಸೂಚಿಸುವುದು)

ಶ್ರೀ ಚೌಡರೆಡ್ಡಿ

(ನಗರಾಭಿವೃದ್ಧಿ ಸಚಿವರು)

ಹೌದು

50 ಕಿ.ಮೀ.ದೂರದಲ್ಲಿರುವ ಕಾವೇರಿ ನದಿ ನೀರನ್ನು ಶಾಶ್ವತ ಜಲಮೂಲವಾಗಿ ಪರಿಗಣಿಸಿ ಸುಧಾರಿತ ನೀರು ಸರಬರಾಜು ಯೋಜನೆಯನ್ನು ಮಾಡಲು ಯೋಜಿಸಲಾಗಿದೆ. ಇದರಂತೆ ರೂ. 1050.00 ಲಕ್ಷ ಮೊತ್ತಕ್ಕೆ ಒಂದು ರೇಖಾ ಅಂದಾಜು ಪಟ್ಟಿಯನ್ನು 1991-92ರ ದರಪಟ್ಟಿ ಮೇರೆಗೆ ತಯಾರಿಸಲಾಗಿದೆ. ವಿವರವಾದ ಭೂಮಾಪನ ಮಾಡಿಸಿದ ನಂತರ ವಿವರವಾದ ಅಂದಾಜು ಪಟ್ಟಿಯನ್ನು ಈಗಿನ ದರಪಟ್ಟಿಗೆ ತಯಾರಿಸಲಾಗುವುದು.

ಉದ್ಭವಿಸುವುದಿಲ್ಲ.

ವಿಷಯ:- ಆಶ್ರಯ ಯೋಜನೆಯ ಮನೆಗಳನ್ನು ಕುರಿತು.

ಪ್ರಶ್ನೆ ಸಂಖ್ಯೆ (ಚುಕ್ಕೆ ಗುರುತಿಲ್ಲದ) 166(271)

ಶ್ರೀ ರವೀಂದ್ರ ನಾಥ ಬಾಬು(ಕೂಟುರು)

ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಆಶ್ರಯ ವಸತಿ ಯೋಜನೆ ನಿರ್ಮಾಣದಲ್ಲಿ ಆರ್.ಸಿ.ಸಿ.ಚಾವಣಿಗಳನ್ನು ಬದಲಾಯಿಸಿ ಎ.ಸಿ.ಶೀಟ್ ಚಾವಣಿಗಳನ್ನು ಹಾಕಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ)ಹಾಗಿದ್ದಲ್ಲಿ,ಚಾವಣಿಯನ್ನು ಬದಲಾಯಿಸಲು ಕಾರಣವೇನು?

ಶ್ರೀ ಗೋಪಿನಾಥ ಆರ್ ಸಾಂಡ್ರ

(ವಸತಿ ಸಚಿವರು)

-ಹೌದು-